# ಯುವಜನತೆಯ ಕನಸುಗಾರಿಕೆ

ಶಾಲಾ ಕಾಲೇಜುಗಳಲ್ಲಿ ಪರೀಕ್ಷೆಗಳು ಮುಗಿದಿವೆ. ವಿದ್ಯಾರ್ಥಿಗಳಿಗೆ ಪರೀಕ್ಷೆ ಮುಗಿದ ಈ ಗಳಿಗೆ ಯಾರೋ ಬಾಯಿ ಬಿಗಿ ಹಿಡಿದು ಉಸಿರುಗಟ್ಟಿಸಿ ಒಮ್ಮೆಲೆ ಬಿಟ್ಟಂತೆ– ನಿರಾಳ, ದೀರ್ಘ ಉಸಿರಾಟದಿಂದ ಹಾಯೆನಿಸುತ್ತಿರುತ್ತದೆ. ಸ್ನೇಹಿತರೊಟ್ಟಿಗೆ ಹಾಡಿ ಕುಣಿಯುತ್ತಾರೆ. ತಂದೆತಾಯಿಯರು ಪ್ರವಾಸಕ್ಕೆ ಕರೆದೊಯ್ಯುತ್ತಾರೆ. ಮತ್ತೆ ತರಗತಿಗಳು ಪ್ರಾರಂಭವಾಗುವವರೆಗೂ ಅವರು ಸ್ವಚ್ಛಂದ ಹಕ್ಕಿಗಳು. ಆಕಾಶವನ್ನು ಬೆರಳಿನಿಂದ ಮುಟ್ಟುವ ತವಕ.

ಮಕ್ಕಳಿಗೆ ಪರೀಕ್ಷೆಗಾಗಿಯೆ ನೆನಪಿಟ್ಟುಕೊಳ್ಳುವುದು ಕಷ್ಟ. ಯಾಕೆಂದರೆ ಬಹುತೇಕರು ಬೇಕೆನಿಸಿದಷ್ಟನ್ನು ಮಾತ್ರ ಪರೀಕ್ಷೆಗಾಗಿಯೆ ಓದಿಕೊಳ್ಳುತ್ತಾರೆ. ಆ ಹಂತದಲ್ಲಿ ವಿದ್ಯೆಯ ಮುಖಾಂತರವೆ ಜ್ಞಾನಾರ್ಜನೆ ಎಂಬುದು ಅವರಿಗೆ ಮನದಟ್ಟಾಗಬೇಕು. ಜ್ಞಾನದ ಹಸಿವಿನಿಂದ ಓದಿದರೆ ನೆನಪಿನಲ್ಲಿ ಉಳಿಯುತ್ತದೆ. ಯಾವುದು ನಮ್ಮನ್ನು ನೋಯಿಸುತ್ತದೋ, ಉರಿದು ಸುಡುತ್ತದೋ ಅದು ನೆನಪಿನಲ್ಲಿ ಉಳಿಯುತ್ತದೆ. ಸಿ.ಡಿ. ಬರ್ನ್ ಮಾಡಿದಂತೆ ಅದು ನಮ್ಮೊಳಗೆ ಬರ್ನ್ ಆದರೆ ಮಾತ್ರ ಶಾಶ್ವತ ನೆನಪು. ಮಧ್ಯರಾತ್ರಿ ಎಣ್ಣೆ ಉರಿಸುವುದೆಂದರೆ ಅದೇ. ಎಲ್ಲಾ ಪರೀಕ್ಷೆಗಳು ಜೀವನದ ಪರೀಕ್ಷೆಗಳು ಎಂದು ತೆಗೆದುಕೊಂಡಾಗ ಮಾತ್ರ ಅದು ಸಾಧ್ಯ.

ಇಂದಿನ ಯುವಜನತೆಗೆ ಒಳ್ಳೆಯ ಮಾರ್ಗದರ್ಶನ ಸಿಗುತ್ತಿದೆಯೆ, ಅವರ ವಿದ್ಯಾಭ್ಯಾಸ ಜೀವನ ಮೌಲ್ಯಗಳನ್ನು ಕಲಿಸುತ್ತಿದೆಯೆ? ವಿದ್ಯೆ ಮಕ್ಕಳನ್ನು ಮುಂದಿನ ಬದುಕಿಗೆ ಅಣಿಗೊಳಿಸಬೇಕು. ಅವರೊಳಗಿನ ವಿಚಾರವನ್ನು ಪ್ರಚೋದಿಸಬೇಕು. ಮುಂದೆ ಸಮಾಜಕ್ಕೂ, ದೇಶಕ್ಕೂ ತನ್ನ ಕೊಡುಗೆಯೇನೆಂದು ತೀರ್ಮಾನಿಸಿಕೊಳ್ಳುವ ಶಕ್ತಿ ತುಂಬುವಂತಿರಬೇಕು. ಅಂದರೆ ತನ್ನ ತಾನು ಸದೃಢಗೊಳಿಸಿಕೊಳ್ಳುವ ಸ್ವಯಂಚಾಲಿತ ತಂತ್ರಾಂಶ ತನ್ನೊಳಗೆ ಸ್ಥಾಪಿತವಾಗಬೇಕು. ಈಗ ಅವರಿಗೆ ಸಿಗುತ್ತಿರುವುದು ಕೇವಲ ಸರ್ಟಿಫಿಕೇಟುಗಳು. ಹುದ್ದೆಯನ್ನರಸುವ ಸಲುವಾಗಿ ಅರ್ಹತಾ ಪತ್ರಗಳು.

ಇಂದಿನ ಯುವಕ/ಯುವತಿಯರಿಗೆ ಸಿಟ್ಟಿದೆ. ತಮಗೆ ಬೇಕಾದದ್ದು ಈ ಸಮಾಜದಲ್ಲಿ ಸುಲಭವಾಗಿ ದೊರಕುವುದಿಲ್ಲ ಎಂಬ ಸಿಟ್ಟು. ಬೇಕಾದದ್ದು ದೊರಕುವುದು ಸಿಟ್ಟಿದ್ದವರಿಗಲ್ಲ, ಪ್ರಯತ್ನಶೀಲರಾದವರಿಗೆ. ಆದ್ದರಿಂದ ಸಿಟ್ಟನ್ನು ತೊರೆದು ಅತೃಪ್ತರಾಗಿರುವುದು ಒಳ್ಳೆಯದು. ಅತೃಪ್ತಿಯೆ ಪ್ರಯತ್ನಶೀಲತೆಗೆ ಕಾರಣ. ನೀವು ಪ್ರಣಯದಲ್ಲಿಯೂ ಸಂತೃಪ್ತರಾಗಬಾರದು, ಹಾಗಿದ್ದರೆ ಪ್ರೇಮಿಸಲೂ ಸಾಧ್ಯವಾಗುವುದಿಲ್ಲ ಎಂಬುದು ಓಷೋ ಅಭಿಮತ. ಇಂದಿನ ಯುವಕರ ಸಿಟ್ಟಿಗೆ ಇನ್ನೊಂದು ಕಾರಣ ಅವರು ಜಗತ್ತನ್ನು ಅಂಗೈಯಲ್ಲಿ ನೋಡುತ್ತಾರೆ. ಅಂದರೆ ಅಂಜನ ಹಚ್ಚಿಕೊಂಡಲ್ಲ, ಅಂಜಲಿಯೊಳಗಡರಿದ ಮೊಬೈಲಿನಲ್ಲಿ. ದೇಶ ವಿದೇಶಗಳ ಆಚಾರ, ವಿಚಾರ, ಸಂಸ್ಕೃತಿಗಳ ಪರಿಚಯವಾಗುವ ಅವರಿಗೆ ನಾವು ಹಲವು ದಶಕಗಳ ಹಿಂದೆ ಬದುಕುತ್ತಿದ್ದೇವೆ ಅನ್ನಿಸದೆ ಇರದು.

ಯುವಜನತೆ ಕನಸುಗಾರರಾಗಬೇಕು. ಕನಸುಗಾರಿಕೆ ರಚನಾತ್ಮಕ ಮಾನಸಿಕ ಕ್ರಿಯೆ. ತನ್ನ ಶಕ್ತಿ ಮತ್ತು ದೌರ್ಬಲ್ಯಗಳನ್ನು ಮೀರದೆ ಬದುಕನ್ನು ಕಟ್ಟಿಕೊಳ್ಳುವ ಸುಂದರ ವಿನ್ಯಾಸ ರಚನೆಯೆ ಕನಸುಗಾರಿಕೆ. ಅದು ಫ್ಯಾಂಟಸಿ ಅಲ್ಲ. ಹಗಲುಗನಸು ಕರ್ತೃತ್ವ ಶಕ್ತಿಯನ್ನು ವ್ಯಯಗೊಳಿಸುತ್ತದೆ. ಯುವಕರು ಭವಿಷ್ಯದಲ್ಲಿ ಬದುಕುತ್ತಾರೆ. ಭೂತದಲ್ಲಿ ಅಂದರೆ ನೆನಪುಗಳಲ್ಲಿ ಬದುಕುವವರು ವಯಸ್ಸಾದವರು, ವೃದ್ಧರು. ನಮಗಿರುವ ಸಮಯ ಕಡಿಮೆ ಇದೆ ಎಂದುಕೊಳ್ಳಬೇಕು, ಆಗ ಮಾತ್ರ ಸಾಧಿಸುವುದು ಬಹಳಷ್ಟಿದೆ ಎಂಬ ಚಡಪಡಿಕೆ ಶುರುವಾಗುತ್ತದೆ.

ಯುವ ಜನತೆ ವೈಯಕ್ತಿಕ, ಸಾಮಾಜಿಕ, ರಾಜಕೀಯ ನೆಲೆಗಳಲ್ಲಿ ಇತಿಹಾಸವನ್ನು ಮತ್ತು ಪರಂಪರೆಯನ್ನು ಸರಿಯಾಗಿ ಅರ್ಥೈಸಿಕೊಳ್ಳಬೇಕು. ಮುಂದಿನ ತೀರ್ಮಾನಗಳಿಗೆ ಅವುಗಳೇ ತಳಹದಿ. ಇಲ್ಲದಿದ್ದರೆ ದುಡುಕಿನ ತೀರ್ಮಾನಗಳಿಗೆ ಬಿದ್ದು ಪರಿತಪಿಸಬೇಕಾಗುತ್ತದೆ. ಬದುಕಿಗೆ ಎಷ್ಟು ಅಗತ್ಯವೊ ಅಷ್ಟು ಧಾರ್ಮಿಕತೆಯನ್ನು ಅಳವಡಿಸಿಕೊಳ್ಳಬೇಕು. ಅವರಿಗೆ ವಿಜ್ಞಾನಿಯ ಕಣ್ಣುಗಳಿರಬೇಕು. ವಿಜ್ಞಾನಿಯು ಅನುಮಾನದಿಂದ ಪ್ರಾರಂಭಿಸುತ್ತಾನೆ, ನಂಬುಗೆಯಲ್ಲಿ ಮುಕ್ತಾಯಮಾಡುತ್ತಾನೆ. ಧಾರ್ಮಿಕ ವ್ಯಕ್ತಿ ನಂಬುಗೆಯಲ್ಲಿ ಪ್ರಾರಂಭಿಸಿ ಸದಾ ಅನುಮಾನದಲ್ಲಿಯೆ ಇರುತ್ತಾನೆ.

ಸೋಯೆನ್ ಶುಕು ಅಮೆರಿಕಾ ದೇಶಕ್ಕೆ ಕಾಲಿಟ್ಟ ಮೊದಲ ಜೆನ್ ಗುರು. ನನ್ನ ಹೃದಯ ಬೆಂಕಿಯಂತೆ ಉರಿಯುತ್ತದೆ ಆದರೆ ಕಣ್ಣುಗಳು ತಣ್ಣಗಾದ ಬೂದಿಯಂತಿರುತ್ತವೆ ಎನ್ನುತ್ತಾನೆ. ಅವನು ತನಗೆ ತಾನೆ ಹಾಕಿಕೊಂಡ ನಿಯಮಗಳು ಯುವಕರಿಗೆಂದೇ ಹೇಳಿದಂತೆ ಆದರ್ಶಪ್ರಾಯವಾಗಿವೆ. ಅವು ಹೀಗಿವೆ; ಅ) ಸಮಯಕ್ಕೆ ಸರಿಯಾಗಿ ಉಣ್ಣಬೇಕು ಆದರೆ ಕಂಠಪೂರ್ತಿ ತಿನ್ನಬಾರದು. ಆ) ನಾವು ಆಡುವ ಮಾತನ್ನು ಗಮನಿಸುತ್ತಿರಬೇಕು, ಆಡಿದಂತೆ ನಡೆದುಕೊಳ್ಳಬೇಕು. ಇ) ಅವಕಾಶ ಬಂದಾಗ ಬಿಡಬಾರದು; ಪ್ರಯತ್ನಿಸುವುದಕ್ಕೂ ಮೊದಲು ಎರಡು ಬಾರಿ ಯೋಚಿಸಬೇಕು. ಈ) ಕಳೆದುದಕ್ಕೆ ವಿಷಾದಿಸಬಾರದು, ಮುಂದೆ ಬರಲಿರುವುದಕ್ಕೆ ಕಾಯಬೇಕು. ಉ) ಒಬ್ಬ ನಾಯಕನಂತೆ ಭಯವಿಹೀನ ನಡೆಯಿರಲಿ ಆದರೆ ಮಗುವಿನಂಥ ವಾತ್ಸಲ್ಯಮಯ ಹೃದಯವಿರಲಿ. ಊ) ಮಲಗುವಾಗ ಇದು ನನ್ನ ಕೊನೆಯ ರಾತ್ರಿ ಎಂದು ಮಲಗಬೇಕು; ಎದ್ದಮೇಲೆ ಹಾಸಿಗೆಯನ್ನು ಹಳೆಯ ಜೋಡುಗಳೆಂಬಂತೆ ನಿರ್ಲಕ್ಷಿಸಬೇಕು.

■ ಮೂಚಿ

## ಮಾತೇ ಮುತ್ತು

★ ದ್ವೇಷಕ್ಕೆ ಪ್ರತಿದ್ವೇಷ ತರವಲ್ಲ; ದ್ವೇಷಿಸುವವನನ್ನು ಲಕ್ಷಿಸದೇ ನಮ್ಮ ಪಾಡಿಗೆ ನಾವಿರುವುದಾದರೆ, ಕ್ರಮೇಣ ಅವನೂ ಸರಿದಾರಿಗೆ ಬರುತ್ತಾನೆ.

–ಜೇಮ್ಸ್ ಅಲೆನ್

★ ಬದುಕಿನಲ್ಲಿ ಉನ್ನತಿ ಕಾಣಬೇಕಾದರೆ ನಮ್ಮ ಸ್ನೇಹಿತರಿಗೆ ನಾವೂ ಮೆಟ್ಟಿಲುಗಳಾಗಿರಬೇಕು; ಅದೇ ನಿಜವಾದ ಸ್ನೇಹದ ಕುರುಹು.

–ಆಫ್ರಿಕನ್ ಗಾದೆ

★ ಸಹಾಯ ಮಾಡುವ ಹೃದಯವಂತಿಕೆ ಇರುವವನಿಗೆ ಮಾತ್ರ, ತಪ್ಪು ಗುರುತಿಸಿ ತಿಳಿಸುವ ಅಧಿಕಾರವುಂಟು.

–ಲಿಂಕನ್

★ ನೀವು ತಪ್ಪು ಮಾಡದಂತಿರಲು, ನಿಮ್ಮನ್ನು ನೀವೇ ಸಂದೇಹಪಡಿ.

–ರಿಚರ್ಡ್ ವೆಟ್

★ ಎಲುಬಿಲ್ಲದ ಪ್ರಾಣಿ ದೃಢವಾಗಿ ನಿಲ್ಲಲಾರದು; ಹೊಣೆಗಾರಿಕೆ ಅರಿಯದ ಮಾನವ ದೃಢಮನಸ್ಸಿನಿಂದ ಕರ್ತವ್ಯ ನಿರ್ವಹಣೆ ಮಾಡಲಾರ.

–ಜವ್ ಬರ್ಡ್

★ ತಂದೆಯನ್ನು ಗೌರವಿಸದವನೊಡನೆ ಸ್ನೇಹ ಬೇಡ. ಶಿಷ್ಟರ ನಡುವೆ ಇರಲು ಅವನು ಯೋಗ್ಯನಲ್ಲ.

–ಇಮಾಮ್ ಸಾ ಆದಿ

★ ಬದುಕಿನ ಗುರಿ ಕೇವಲ ಆಲೋಚನೆಯಲ್ಲಿ ಮುಕ್ತಾಯಗೊಳ್ಳುವುದಿಲ್ಲ; ಅದು ಹಿಡಿದ ಕಾರ್ಯವನ್ನು ಸಮರ್ಪಕವಾಗಿ ಮುಕ್ತಾಯಗೊಳಿಸುವುದರಲ್ಲಿ ಅಡಗಿದೆ.

–ಥಾಮಸ್ ಹಕ್‌ಲೇ

★ ಗುರಿ ಎಂಬುವುದೊಂದು ನಕ್ಷತ್ರವಿದ್ದ ಹಾಗೆ; ಅದನ್ನು ದಾರಿದೀಪವೆಂದೆಣಿಸಿ ಹಿಂಬಾಲಿಸಿ ನಡೆದರೆ ಗುರಿ ಮುಟ್ಟುವುದು ನಿಶ್ಚಿತ.

–ಕಾರ್ಲರೂಸ್

★ ಸಂಕಟ ಎಂಬುದನ್ನು ಅರ್ಥ ಮಾಡಿಕೊಂಡರೆ, ಕಷ್ಟದಲ್ಲಿರುವವರಿಗೆ ನೆರವಾಗಬೇಕೆಂಬ ಪ್ರಜ್ಞೆ ಮೂಡುತ್ತದೆ.

–ವರ್ಜಿಲ್

★ ಜಾತಿ ವ್ಯವಸ್ಥೆ ಭಾರತದಲ್ಲಿ ಕೇವಲ ಅಸ್ಪೃಶ್ಯ ಮತ್ತು ಉಚ್ಚ ವರ್ಣಗಳನ್ನಷ್ಟೇ ನಿರ್ಮಿಸಿಲ್ಲ. ಎಲ್ಲ ವರ್ಣಗಳಲ್ಲೂ ಅನೇಕ ಜಾತಿ ಉಪಜಾತಿಗಳನ್ನು ನಿರ್ಮಿಸಿದೆ. ಇದರಿಂದಾಗಿ ಅಸ್ಪೃಶ್ಯರು ಮಾತ್ರ ಗುಲಾಮರಲ್ಲ, ಭಾರತೀಯರೆಲ್ಲರ ಮನಸ್ಸನ್ನು ಗುಲಾಮರನ್ನಾಗಿಸಿದೆ.

–ಬಿ.ಆರ್.ಅಂಬೇಡ್ಕರ್